# ೩ ಆಮೆ

ಅದೊಂದು ಮಳೆಗಾಲದ ದಿನ. ಸಂಜೆಯ ಸಮಯ. ಸುರಿಯುತ್ತಿರುವ ಮಳೆ ಅದೇ ತಾನೇ ಕಡಿಮೆಯಾಗಿತ್ತು. ಆರನೆಯ ವರ್ಗದ ವಿದ್ಯಾರ್ಥಿ ರಾಜು ಶಾಲೆಯಿಂದ ಮನೆಗೆ ಬಂದ. ಅವನು ಬರುವಾಗ ಒಂದು ಚೀಲದಲ್ಲಿ ಆಮೆಯ ಮರಿಯೊಂದನ್ನು ತಂದಿದ್ದನು. ಅದನ್ನು ಮನೆಯವರಿಗೆಲ್ಲ ತೋರಿಸಿದನು. ''ನಾನು ಶಾಲೆ ಬಿಟ್ಟು ಬರುವಾಗ ಈ ಮರಿ ಮಳೆಯ ನೀರಿನಲ್ಲಿ ಕಾಣಿಸಿತು. ನನಗೆ ಕನಿಕರವೆನಿಸಿ ಅದನ್ನು ಎತ್ತಿಕೊಂಡು ಬಂದೆ'' ಎಂದು ಹೇಳಿದನು. ''ಇದು ಬಹಳ ಮುದ್ದಾಗಿದೆಯಲ್ಲ!'' ಎಂದು ತಾಯಿ ಅಂದಳು. ರಾಜು ನಿನ್ನ ಪ್ರಾಣಿದಯೆ ಗುಣಕ್ಕೆ ನಾನು ಮೆಚ್ಚಿದೆನು. ಈ ಗುಣವು ಅನೇಕ ಜೀವಿಗಳ ಜೀವನಕ್ಕೆ ಆಧಾರವಾಗಿರಲಿ. ಆದರೆ ಸ್ವತಂತ್ರವಾಗಿರುವ ಈ ಪ್ರಾಣಿಯನ್ನು ಹಿಡಿದು ತಂದು ಸಾಕುವುದು ಅಪರಾಧ. ಆದ್ದರಿಂದ ಇದನ್ನು ಸ್ವತಂತ್ರವಾಗಿರಲು ಬಿಟ್ಟುಬಿಡು ಎಂದು ತಂದೆ ಹೇಳಿದನು. ಅಪ್ಪಾ ಈಗ ಇದನ್ನು ಹೊರಗೆ ಬಿಟ್ಟರೆ ಏನಾದರೂ ಅಪಾಯವಾಗಬಹುದಲ್ಲವೇ? ಆದ್ದರಿಂದ ಇದನ್ನು ಬಿಟ್ಟುಬಿಡಲು ನನ್ನ ಮನಸ್ಸು ಒಪ್ಪದು ಎಂದನು ರಾಜು. ಹಾಗಾದರೆ ಇದನ್ನು ಊರ ಮುಂದಿರುವ ಬಾವಿಗೆ ಬಿಟ್ಟು ಬಿಡು, ಅಲ್ಲಿ ಅದಕ್ಕೆ ಯಾವ ತೊಂದರೆಯೂ ಆಗುವುದಿಲ್ಲ, ಮತ್ತೆ ದಿನಾಲು ಅದನ್ನು ನೀನು ನೋಡಬಹುದು ಎಂದು ತಂದೆ ಹೇಳಿದರು.



ಕೆಲವು ದಿನಗಳು ಗತಿಸಿದವು. ಸುತ್ತಲಿನ ಗ್ರಾಮಗಳಲ್ಲಿ ಕಾಲರಾ ಮತ್ತು ಮಲೇರಿಯಾ ರೋಗಗಳು ಹಬ್ಬಿದವು. ರೋಗಗಳನ್ನು ತಡೆಗಟ್ಟಲು ವೈದ್ಯರ ತಂಡಗಳು ಊರೂರಗಳಿಗೆ ಭೇಟಿ ಕೊಟ್ಟು ಜನರಿಗೆ ಸ್ವಚ್ಛತೆ, ಸ್ವಚ್ಛ ನೀರು, ಬಿಸಿ ಆಹಾರ ಮುಂತಾದ ಮುಂಜಾಗ್ರತೆಯ ಕ್ರಮಗಳ ಬಗ್ಗೆ ಮಾಹಿತಿ ನೀಡತೊಡಗಿದರು. ಅದರಂತೆ ಒಂದು ದಿನ ಈ ಊರಿಗೂ ವೈದ್ಯರ ತಂಡ ಬಂದಿತು. ಗ್ರಾಮ ಪಂಚಾಯತ ಆಫೀಸಿನ ಎದುರಿಗೆ ಸಭೆ ಇಟ್ಟುಕೊಳ್ಳಲಾಯಿತು. ಸಭೆಯಲ್ಲಿ ಊರಿನ ಎಲ್ಲ ನಾಗರಿಕರೂ, ಶಾಲೆಯ ಮಕ್ಕಳು ಉಪಸ್ಥಿತರಿದ್ದರು.



ನಾವು ನಮ್ಮ ಮನೆಯನ್ನು, ಪರಿಸರವನ್ನು ಸ್ವಚ್ಛವಾಗಿರಸಬೇಕು. ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ನೀರು ಒಂದೆಡೆಯೇ ನಿಂತುಕೊಂಡರೆ ಅಲ್ಲಿ ಸೊಳ್ಳೆಗಳು ಹುಟ್ಟುತ್ತವೆ. ಅವುಗಳಿಂದ ನಮಗೆ ಹಲವಾರು ರೋಗಗಳು ಬರುತ್ತವೆ. ಸ್ವಚ್ಛವಾದ ಹಾಗೂ ಬಿಸಿಯಾದ ಆಹಾರ ಸೇವನೆ ಮಾಡಬೇಕು. ನೀರನ್ನು ಕುದಿಸಿ ಆರಿಸಿ ಕುಡಿಯಬೇಕು. ಸುತ್ತಲಿನ ಗ್ರಾಮಗಳಲ್ಲಿ ಬಹಳಷ್ಟು ಜನರಿಗೆ ಮಲೇರಿಯಾ ಮತ್ತು ಕಾಮಾಲೆ ರೋಗಗಳು ಉಂಟಾಗಿವೆ. ನಿಮ್ಮ ಗ್ರಾಮದ ಜನರು ಸುದೈವಿಗಳು. ನಿಮಗೆ ಈ ರೋಗಗಳ. ಸ್ಪರ್ಶವಾಗಿಲ್ಲ ಆದರೂ ಇಂದು ನಾವು ಕುಡಿಯುವ ನೀರಿಗೆ ಬ್ಲೀಚಿಂಗ ಪೌಡರ್ ಹಾಕುತ್ತೇವೆ. ನೀವು ಭಯಪಡುವ ಕಾರಣವಿಲ್ಲ ಎಂದು ವೈದ್ಯರು ಹೇಳಿದರು. ತಕ್ಷಣ ರಾಜು ಎದ್ದು ನಿಂತು, ಸರ್ ನೀವು ಭಾವಿಯಲ್ಲಿ ಔಷಧ ಹಾಕಿದರೆ ನೀರಿನಲ್ಲಿರುವ ಆಮೆಗೆ ಏನಾದರೂ ತೊಂದರೆ ಆಗುತ್ತದೆಯೇ? ಎಂದು ಕೇಳಿದನು. ಏನು, ನಿಮ್ಮೂರ ಬಾವಿಯಲ್ಲಿ ಆಮೆ ಇದೆಯೇ! ಎಂದು ವೈದ್ಯರು ಕೇಳಿದರು. ಹೌದು ಸರ್ ನಾನು ಶಾಲೆಯಿಂದ ಬರುವಾಗ ಆಮೆ ಮರಿ ಸಿಕ್ಕಿತು. ಅದನ್ನು ತಂದು ಬಾವಿಯಲ್ಲಿ ಬಿಟ್ಟಿದ್ದೇನೆ. ಅದು ಈಗ ಬೆಳೆದು ದೊಡ್ಡದಾಗಿದೆ. ಎಂದನು ರಾಜು. ವೈದ್ಯಕೀಯ ಅಧಿಕಾರಿಗಳು ರಾಜುವಿನ ಬಳಿಗೆ ಬಂದು ರಾಜುವಿನ ಬೆನ್ನು ತಟ್ಟಿದರು. ಸುತ್ತಲಿನ ಗ್ರಾಮಗಳಲ್ಲಿ ರೋಗ ಹಬ್ಬಿದೆ, ನಿಮ್ಮ ಊರಿನಲ್ಲಿ ಮಾತ್ರ ಯಾವುದೇ ತೊಂದರೆಯುಂಟಾಗಿಲ್ಲ, ಇದರ ಕಾರಣ ಇಲ್ಲಿಯೇ ಇದೆ. ಕುಡಿಯುವ ನೀರಿನ ಬಾವಿಯಲ್ಲಿ ಆಮೆ ಇದೆ. ಅದು ನೀರಿನಲ್ಲಿರುವ ಕ್ರಿಮಿ ಕೀಟಕಗಳನ್ನು ತಿಂದು ನೀರನ್ನು ಶುದ್ಧಗೊಳಿಸುತ್ತದೆ. ಆಮೆ ನಿಮ್ಮ ಗ್ರಾಮಸ್ಥರ ಆರೋಗ್ಯದ ರಕ್ಷಣೆ ಮಾಡಿದೆ.

ಬಾವಿಗಳಲ್ಲಿ, ಹಳ್ಳಗಳಲ್ಲಿ, ನದಿ, ಕೆರೆಗಳಲ್ಲಿ ಜಲಚರ ಪ್ರಾಣಿಗಳು ಇರುವುದರಿಂದಲೇ ಅಲ್ಲಿಯ ನೀರು ಶುದ್ಧವಾಗಿರುತ್ತದೆ. ರಾಜು ಮಾಡಿದ ಕೆಲಸಕ್ಕೆ ನೀವೆಲ್ಲ ಹೆಮ್ಮೆ ಪಡಬೇಕು. ಪರೋಪಕಾರ, ಅನುಕಂಪ, ಸಹಾನುಭೂತಿ, ಪ್ರಾಣಿದಯೆ ಮುಂತಾದ ಗುಣಗಳು ಚಿಕ್ಕಂದಿನಿಂದಲೇ ಬೆಳೆಯುತ್ತಿರಬೇಕು. ಇಂದಿನ ಬಾಲಕರೇ ನಾಳೆಯ ನಾಯಕರು ಎಂಬಂತೆ,, ಇಂದು ಚಿಕ್ಕವರಿರುವ ಈ ಮಕ್ಕಳಲ್ಲಿ ಒಳ್ಳೆಯ ಗುಣಗಳು ಬೆಳೆಯುವಂತೆ ಪ್ರೋತ್ಸಾಹನೆ ನೀಡಿದರೆ ಮುಂದೆ ಸಮಾಜದಲ್ಲಿ ಒಳ್ಳೆಯ ಪರಿಣಾಮವಾಗುತ್ತದೆ ಎಂದು ಪ್ರಶಂಸೆ ಮಾಡಿದರು. ಎಲ್ಲರೂ ಚಪ್ಪಾಳೆ ತಟ್ಟಿ ರಾಜುನನ್ನು ಅಭಿನಂದಿಸಿದರು.

– ಕೃಷ್ಣ ಎಂ. ವ್ಹಿ.

**ಶಬ್ದಗಳ ಅರ್ಥ :-**

ತಂಡ - ಗುಂಪು; ಬ್ಲೀಚಿಂಗ ಪೌಡರ - ನೀರನ್ನು ಶುದ್ಧಿಗೊಳಿಸುವ ಔಷಧಿ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ಸ್ಪರ್ಶ** __________ **; ಜಲಚರ** __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ರಾಜು ಶಾಲೆಯಿಂದ ಬರುವಾಗ ಏನು ತಂದನು ?

ಆ) ಸುತ್ತಲಿನ ಗ್ರಾಮಗಳಲ್ಲಿ ಯಾವ ರೋಗ ಹಬ್ಬಿತು ?

ಇ) ಜಲಚರ ಪ್ರಾಣಿಗಳು ಏನು ಮಾಡುತ್ತವೆ ?

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಅವುಗಳಿಗೆ ಉತ್ತರ ಬರೆಯಿರಿ.**

**ಅ)** __________

**ಉತ್ತರ** __________

**ಆ)** __________

**ಉತ್ತರ** __________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು, ಯಾರಿಗೆ ಹೇಳಿದರು.**

ಅ) ಇದು ಬಹಳ ಮುದ್ದಾಗಿದೆಯಲ್ಲ !

ಆ) ಈ ಪ್ರಾಣಿಯನ್ನು ಹಿಡಿದು ತಂದು ಸಾಕುವುದು ಅಫರಾಧ.

ಇ) ನಾವು ಮನೆಯನ್ನು ಪರಿಸರವನ್ನು ಸ್ವಚ್ಛವಾಗಿಡಬೇಕು.

ಈ) ಬಾವಿಯಲ್ಲಿ ಔಷಧ ಹಾಕಿದರೆ ಆಮೆಗೆ ಏನಾದರೂ ತೊಂದರೆ ಆಗುತ್ತದೆಯೇ ?

ಉ) ಏನು, ನಿಮ್ಮೂರ ಬಾವಿಯಲ್ಲಿ ಆಮೆ ಇದೆಯೆ !

**ಪ್ರಶ್ನೆ ೪) ಹೊಂದಿಸಿ ಬರೆಯಿರಿ.**

| 'ಅ' ಗುಂಪು | | 'ಬ' ಗುಂಪು |
|---|---|---|
| ಅ) ಆಮೆ | [ ] | ೧) ಸೊಳ್ಳೆ |
| ಆ) ಪ್ರಾಣಿದಯೆ | [ ] | ೨) ರೋಗ |
| ಇ) ಕಾಮಾಲೆ | [ ] | ೩) ಪ್ರಾಣಿ |
| ಈ) ನಿಂತ ನೀರು | [ ] | ೪) ರಾಜು |

**ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿಯ ನಾಮಪದಗಳನ್ನು ಗುರುತಿಸಿ ಅವುಗಳ ಕೆಳಗೆ ಗೆರೆ ಹೊಡೆಯಿರಿ.**

೧) ಶಾಮನು ಊರಿಗೆ ಹೋದನು.

೨) ಕಮಲೆ ಒಳ್ಳೆಯ ಆಟಿಕೆಯನ್ನು ತಂದಳು.

೩) ನರ್ಮದಾ ನದಿಯು ಹರಿಯುತ್ತಿದೆ.

**ಉಪಕ್ರಮ :** ಸ್ಥಳಿಯ ವೈದ್ಯರನ್ನು ಭೇಟಿಯಾಗಿ ಸಾಂಕ್ರಮಿಕ ರೋಗವನ್ನು ತಡೆಗಟ್ಟುವ ಕುರಿತು ಮಾಹಿತಿ ತಿಳಿದುಕೊಳ್ಳಿರಿ.

# ಪರೋಪಕಾರವೇ ಪುಣ್ಯ

**ವ್ಯಾಕರಣ :**

**ಸರ್ವನಾಮ**

ಉದಾ : ೧) ಶಾರದೆಯು ಬಹಳ ಜಾಣಳು. ಅವಳು ದಿನಾಲೂ ಶಾಲೆಗೆ ಹೋಗುವಳು. ಅವಳು ಪಾಠ ಓದುವಳು.

೨) ಮಂಗಗಳು ತೋಟಕ್ಕೆ ಬಂದವು. ಅವು ಮರಗಳನ್ನು ಏರಿದವು.

೩) ನಾನು ಶಾಲೆಗೆ ಹೋಗುವೆನು. ನನ್ನ ವರ್ಗಮಿತ್ರರೊಂದಿಗೆ ಆಡುವೆನು.

೪) ಅವನು ಕೇಳಿದನು, 'ನೀನು ಯಾರು?'

ಮೇಲಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದಗಳಾದ ಅವಳು, ಅವು, ನಾನು, ನನ್ನ, ಅವನು, ನೀನು, ಇವುಗಳನ್ನು ನಾಮಪದಗಳ ಬದಲಾಗಿ ಬಳಸಲಾಗಿದೆ. ನಾಮಪದಗಳ ಬದಲಾಗಿ ಬಳಸುವ ಶಬ್ದಗಳಿಗೆ ಸರ್ವನಾಮ'ಗಳು ಅನ್ನುವರು.



HY9HZH